ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಸದಸ್ಯರು ಹೇಳಿದಂತೆ ನಾವು ಹೋಟೆಲ್ ಮಾಲೀಕರ ಪರವಾಗಿಲ್ಲ. ಬೆಲೆ ಏರಿಕೆಯನ್ನು ತಡೆಗಟ್ಟುವುದಕ್ಕೆ ಏನೇನು ಕ್ರಮ ಕೈಗೊಂಡಿದ್ದೀರಿ ಎಂದು ಮಾನ್ಯ ಸದಸ್ಯರು ಕೇಳಿದರು. ಆ ಬಗ್ಗೆ ಹೇಳುವುದಾದರೆ ನಾವು ಈಗಾಗಲೇ ಎರಡು ಸಾರಿ ಹೋಟೆಲ್ ಮಾಲೀಕರ ಸಭೆಯನ್ನು ನಡೆಸಿ ಅವರ ಸಮಸ್ಯೆಗಳನ್ನು ಆಧ್ಯಯನ ಮಾಡಿದಾಗ ಅವರು ವಿದ್ಯುಚ್ಛಕ್ತಿ, ನೀರು, ಕಾರ್ಪೊರೇಷನ್ ತೆರಿಗೆ ಇತ್ಯಾದಿ ಅಗತ್ಯ ವಸ್ತುಗಳ ಬೆಚ್ಚದಲ್ಲಿ ಏರಿಕೆಯಾಗಿರುವುದರಿಂದ ನಾವು ಬೆಲೆಗಳನ್ನು ಹೆಚ್ಚು ಮಾಡಬೇಕಾಗಿ ಬಂತು ಎಂದು ತಿಳಿಸಿದ್ದಾರೆ. ಇನ್ನು ಸರ್ಕಾರದವರು ಹೋಟೆಲ್ ಮಾಲೀಕರಿಗೆ ಏನೇನು ರಿಯಾಯಿತಿಯನ್ನು ಕೊಡುತ್ತಿದ್ದೇವೆಂದರೆ ಅಕ್ಕಿಯ ಮೇಲೆ ಇದ್ದಂಥ ಮಾರಾಟ ತೆರಿಗೆಯನ್ನು ೪ ಪರ್ಸೆಂಟ್‌ನಿಂದ ೨ ಪರ್ಸೆಂಟ್‌ಗೆ ಇಳಿಸಿದ್ದೇವೆ. ಮತ್ತೆ ಎಣ್ಣೆ ಮೇಲಿನ ಮಾರಾಟ ತೆರಿಗೆಯನ್ನು ಕಡಿಮೆ ಮಾಡಿದ್ದೇವೆ. ಮತ್ತೆ ಹೋಟೆಲ್‌ಗಳ ಮೇಲೆ ವಿಧಿಸಿದ್ದ ಮಾರಾಟ ತೆರಿಗೆಯನ್ನು ೫ ಪರ್ಸೆಂಟ್‌ನಿಂದ ೪ ಪರ್ಸೆಂಟ್‌ಗೆ ಇಳಿಸಿದ್ದೇವೆ. ಸರ್ಕಾರದವರು ಸಾಕಷ್ಟು ಸಹಾಯವನ್ನು ಹೋಟೆಲ್ ನವರಿಗೆ ಮಾಡಿದ್ದಾರೆ. ಈ ವಿಷಯವನ್ನು ಹೇಳಿದಾಗ ಅವರು ಇನ್ನು ಮುಂದೆ ನಾವು ಬೆಲೆ ಏರಿಕೆಯನ್ನು ಮಾಡುವುದಿಲ್ಲವೆಂದು ನಮಗೆ ತಿಳಿಸಿದ್ದಾರೆ. ಬೆಲೆ ಏರಿಕೆ ವಿಷಯದಲ್ಲಿ ಮಾನ್ಯ ಸದಸ್ಯರಿಗೆ ಒಂದು ವಿಷಯವನ್ನು ಹೇಳುವುದಾದರೆ ಅಗತ್ಯ ವಸ್ತುಗಳ ಬೆಲೆ ಶೇಕಡ ೧೦ರಷ್ಟು ಏರಿಸಿದ್ದರೆ ಹೋಟೆಲ್‌ನವರು ಬೆಲೆ ಏರಿಸಿರುವುದು ಕೇವಲ ೬ ಪರ್ಸೆಂಟ್ ಮಾತ್ರ. ಆದ್ದರಿಂದ ಇನ್ನು ಮುಂದೆ ಬೆಲೆ ಏರಿಕೆಯಾಗದಂತೆ ನೋಡಿಕೊಳ್ಳಲಾಗುತ್ತದೆ. ಆ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂದು ಮಾನ್ಯ ಸದಸ್ಯರು ಕೇಳಿದರು. ಆ ಬಗ್ಗೆ ಹೇಳುವುದಾದರೆ ಸರ್ಕಾರ "Karnataka Food Stuffs Display of Price by Caterers Order 1983". ಎಂದು ಒಂದು ಆದೇಶವನ್ನು ಹೊರಡಿಸಿದೆ. ಇದರ ಪ್ರಕಾರ ಹೋಟೆಲ್ ಮಾಲೀಕರು ಮತ್ತು ಉಪ ಹೋಟೆಲ್ ಮಾಲೀಕರು ಹೋಟೆಲ್‌ಗಳಲ್ಲಿ ಬೆಲೆಗಳ ವಿವರಗಳನ್ನು ಹಾಕಿರಬೇಕು. ಮತ್ತು ರಸೀದಿ ಕೊಡಬೇಕೆಂದು ಇದೆ. ಈ ಆದೇಶವನ್ನು ಉಲ್ಲಂಘನೆ ಮಾಡಿದವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವ ಅವಕಾಶ ಇದೆ.

ಶ್ರೀ ಎಸ್. ನಂಜಪ್ಪ.—ಅಗತ್ಯವಸ್ತುಗಳ ಬೆಲೆ ಶೇಕಡ ೧೦ರಷ್ಟು ಏರಿಕೆಯಾಗಿದೆ ಆದರೆ ಅವರು ೬ ಪರ್ಸೆಂಟ್‌ನಷ್ಟು ಮಾತ್ರ ಬೆಲೆ ಏರಿಕೆ ಮಾಡಿದ್ದಾರೆಂದು ಮಾನ್ಯಮಂತ್ರಿಗಳು ಹೇಳುವುದು ಸರಿಯಲ್ಲ ಆದರೆ ಇವತ್ತು ಹೋಟೆಲ್‌ಗಳಲ್ಲಿ ಗಾತ್ರ ಮತ್ತು ಗುಣಮಟ್ಟ ಬಹಳ ಕಡಿಮೆಯಾಗಿದೆ. ಒಂದು ಲೋಟ ಕಾಫಿ ಕುಡಿಯಲು ಹೋದರೆ ಗ್ಲಾಸ್ ಸಹ ಬಹಳ ಚಿಕ್ಕದಾಗಿದೆ. ಇದರಿಂದ ಶೇಕಡ ೨೦ರಷ್ಟು ಬೆಲೆ ಏರಿಕೆಯಾಗಿದೆ. ಇದನ್ನು ಪರಿಶೀಲನೆ ಮಾಡಬೇಕೆಂದು ವಿನಂತಿ.

ಶ್ರೀ ಜಿ. ಬಸವಣ್ಣಪ್ಪ.—ಆಹಾರ ಇಲಾಖೆಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದ್ದೇವೆ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದಂಥ ವಿಷಯವನ್ನು ಕೂಲಂಕುಷವಾಗಿ ಚರ್ಚೆ ಮಾಡಲಾಗುವುದು.

3. ಚಿತ್ರಮಂದಿರಗಳಲ್ಲಿ ಚಿತ್ರಪ್ರದರ್ಶನಗಳ ಸಂದರ್ಭದಲ್ಲಿ ಕಾನೂನಿನ ಉಲ್ಲಂಘನೆ

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ ಚಲನಚಿತ್ರಮಂದಿರಗಳಲ್ಲಿ ನಡೆಯುತ್ತಿರುವ ಅನ್ಯಾಯಗಳ ಬಗ್ಗೆ ನಾನು ಮಾನ್ಯ ವಾರ್ತಾ ಹಾಗೂ ಕ್ರೀಡೆ ಮತ್ತು ಪ್ರವಾಸೋದ್ಯಮ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜೀವರಾಜ ಆಳ್ವ(ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು).—

ಬೆಂಗಳೂರು ನಗರ ಹಾಗೂ ಇತರ ಸ್ಥಳಗಳಲ್ಲಿ ಚಲನಚಿತ್ರಮಂದಿರಗಳಲ್ಲಿ ದಿನವೊಂದಕ್ಕೆ ಐದು ಚಲನಚಿತ್ರ ಪ್ರದರ್ಶನಗಳನ್ನು ನಡೆಸಲಾಗುತ್ತಿತ್ತು. ಆದುದರಿಂದ ಚಲನಚಿತ್ರಮಂದಿರದ ಶುಚಿತ್ವ ಕೆಳೆದುಕೊಂಡು ಕೆಟ್ಟ ವಾತಾವರಣದಿಂದ ಜನರ ಆರೋಗ್ಯ ಕೆಡುತ್ತದೆಂಬ ಕಾರಣದಿಂದ ಕರ್ನಾಟಕ ಸಿನಿಮಾ (ಆರ್)ರೂಲ್ಸ್ ೧೯೭೧ರ ನಿಯಮ ೪೧ನ್ನು ಅಧಿಸೂಚನೆ ಸಂಖ್ಯೆ ಹೆಚ್‌ಡಿ ೫೯ ಸಿಎನ್‌ಎ ೮೧, ದಿನಾಂಕ ೧೬-೮-೧೯೮೧ರಂದು ತಿದ್ದುಪಡಿ ಮಾಡಲಾಯಿತು. ಈ ತಿದ್ದುಪಡಿ ಮಾಡಿದ ಹೊಸ ನಿಯಮ ೪೧(ಎ)ರ ಪ್ರಕಾರ ಚಲನಚಿತ್ರಮಂದಿರದ ಪರವಾನಗಿದಾರರು ದಿನವೊಂದಕ್ಕೆ ೪ಕ್ಕಿಂತ ಹೆಚ್ಚು ಚಲನಚಿತ್ರ ಪ್ರದರ್ಶನಗಳನ್ನು ನಡೆಸಕೂಡದು. ಸರ್ಕಾರದ ಈ ತಿದ್ದುಪಡಿಯ ವಿರುದ್ಧ ಕೆಲವು ಚಿತ್ರಮಂದಿರಗಳ

ಮಾಲೀಕರು ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ರಿಟ್ ಅರ್ಜಿಯನ್ನು ಸಲ್ಲಿಸಿದರು. ರಿಟ್ ಅರ್ಜಿಯನ್ನು ಪರಿಶೀಲಿಸಿದ ಉಚ್ಚ ನ್ಯಾಯಾಲಯವು, ಈ ತಿದ್ದುಪಡಿಯನ್ನು ಎತ್ತಿಹಿಡಿಯಿತು. ಈ ಉಚ್ಚ ನ್ಯಾಯಾಲಯದ ಆಜ್ಞೆಯ ವಿರುದ್ಧ ಹಲವಾರು ಚಿತ್ರಮಂದಿರಗಳ ಮಾಲೀಕರು ಭಾರತದ ಸರ್ವೋಚ್ಚ ನ್ಯಾಯಾಲಯಕ್ಕೆ ರಿಟ್ ಅರ್ಜಿಯನ್ನು ಸಲ್ಲಿಸಿ ತಡೆಯಾಜ್ಞೆಯನ್ನು ಪಡೆದಿದ್ದಾರೆ. ಈಗ ಸಧ್ಯದಲ್ಲಿ ರಿಟ್ ಅರ್ಜಿಗಳು ನ್ಯಾಯಾಲಯದ ಮುಂದೆ ಇರುವುದರಿಂದ ನ್ಯಾಯಾಲಯದಿಂದ ತಡೆಯಾಜ್ಞೆ ಪಡೆದು ಳಿಕ್ಕಿಂತ ಹೆಚ್ಚು ಪ್ರದರ್ಶನಗಳನ್ನು ನಡೆಸುತ್ತಿರುವ ಚಿತ್ರಮಂದಿರಗಳ ಮಾಲೀಕರ ಮೇಲೆ ಯಾವ ಕ್ರಮವನ್ನು ತೆಗೆದು ಕೊಳ್ಳಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ.

ಚಲನಚಿತ್ರ ಮಂದಿರಗಳಲ್ಲಿ ಕಾನೂನನ್ನು ಉಲ್ಲಂಘಿಸಿ ಪರವಾನಗಿ ಇಲ್ಲದ ಬ್ಲೂ ಫಿಲಿಂಗಳನ್ನು ಪ್ರದರ್ಶಿಸುತ್ತಿರುವುದು ಸರಕಾರದ ಗಮನಕ್ಕೆ ಬಂದಿರುವುದಿಲ್ಲ. ಆದರೂ ಕೇಂದ್ರ ಸರ್ಕಾರವು ನೀಡುತ್ತಿರುವ ಸೂಚನೆ ಮೇರೆಗೆ ಚಲನಚಿತ್ರಮಂದಿರಗಳಲ್ಲಿ ಚಲನಚಿತ್ರಗಳನ್ನು ಪ್ರದರ್ಶಿಸುವಾಗ ಬ್ಲೂ ಫಿಲಂ, ಸೆನ್ಸಾರ್ ಬೋರ್ಡಿನಿಂದ ಸರ್ಟಿಫಿಕೇಟ್ ಪಡೆಯದ ಚಿತ್ರಗಳನ್ನು, ಕೇಂದ್ರ ಸರ್ಕಾರದಿಂದ ಬಹಿಸ್ಕರಿಸಲ್ಪಟ್ಟ ಚಿತ್ರಗಳನ್ನು, ನಕಲಿ ಸೆನ್ಸಾರ್ ಸರ್ಟಿಫಿಕೇಟ್ ಪಡೆದಿರುವ ವಿದೇಶಿ ಚಲನಚಿತ್ರಗಳನ್ನು, ಹಾಗೂ ಸೆನ್ಸಾರ್ ಬೋರ್ಡಿನವರು ಸರ್ಟಿಫಿಕೇಟ್ ನೀಡುವಾಗ ತೆಗೆದುಹಾಕಲಾದ ಚಿತ್ರದ ಭಾಗಗಳನ್ನು ಪುನಃ ಸೇರಿಸಿ ಪ್ರದರ್ಶಿಸಬಾರದೆಂದು ಆಗ್ಗಿಂದಾಗ್ಗೆ ಎಲ್ಲಾ ಜಿಲ್ಲಾ ದಂಡಾಧಿಕಾರಿಗಳಿಗೆ ಸೂಚನೆಯನ್ನು ನೀಡಲಾಗುತ್ತಿದೆ. ಚಲನಚಿತ್ರ ಪ್ರದರ್ಶನದ ನಿಯಮವನ್ನು ಉಲ್ಲಂಘಿಸಿದ ಚಿತ್ರಮಂದಿರಗಳ ಮಾಲೀಕರನ್ನು ಕೇಂದ್ರ ಸಿನಿಮಾ ಟೋಗ್ರಫ್ ಆಕ್ಟ್ ೧೯೫೨ರ ವಿಧಿ ೭ ಮತ್ತು ೭(ಎ) ಮೇರೆಗೆ ಶಿಕ್ಷೆಗೆ ಗುರಿಪಡಿಸಲಾಗುವುದು ಇಲ್ಲವೇ ಅಂಥಹ ಚಿತ್ರಗಳ ಪ್ರತಿಗಳನ್ನು ಮುಟ್ಟುಗೋಲು ಹಾಕಲಾಗುವುದು.

ಈ ವಿಷಯದಲ್ಲಿ ಚಿತ್ರಮಂದಿರಗಳ ಮಾಲೀಕರು ಕಾನೂನನ್ನು ಉಲ್ಲಂಘನೆ ಮಾಡಿಲ್ಲ ಎಂಬುದಾಗಿ ಕೆಲವು ಜಿಲ್ಲಾ ದಂಡಾಧಿಕಾರಿಗಳು ಸರ್ಕಾರಕ್ಕೆ ವರದಿಗಳನ್ನು ಸಲ್ಲಿಸಿದ್ದಾರೆ. ಕಾನೂನನ್ನು ಉಲ್ಲಂಘನೆ ಮಾಡಿದ ಚಿತ್ರಮಂದಿರಗಳ ಮಾಲೀಕರ ಮೇಲೆ ಕಾನೂನಿನಂತೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುವಂತೆ ಜಿಲ್ಲಾ ದಂಡಾಧಿಕಾರಿಗಳಿಗೆ ಸೂಚಿಸಲಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರ ಒಂದರಲ್ಲೇ ದಿನಕ್ಕೆ ಮೂರು ಲಕ್ಷ ಜನ ಸಿನಿಮಾ ಪ್ರೇಕ್ಷಕರು ಇದ್ದಾರೆ. ಅವರು ಹೇಳುತ್ತಾರೆ, ಬ್ಲೂ ಫಿಲ್ಮ್, ನಕಲಿ ಸೆನ್ಸಾರ್ ಬೋರ್ಡ್ ಸರ್ಟಿಫಿಕೇಟ್ ಪಡೆದಿರುವ ವಿದೇಶಿ ಚಲನಚಿತ್ರಗಳು, ಸೆನ್ಸಾರ್ ಬೋರ್ಡ್‌ನವರು ವೀಕ್ಷಣೆ ಮಾಡಿ, ಸೆನ್ಸಾರ್ ಸರ್ಟಿಫಿಕೇಟ್ ನೀಡುವಾಗ, ತೆಗೆದುಹಾಕಲಾದ ಚಿತ್ರದ ಭಾಗವನ್ನು ಪುನಃ ಸೇರಿಸಬಾರದೆಂದು ನಿಯಮ ಇದ್ದರೂ ಕೂಡಾ, ಅದನ್ನೂ ಸೇರಿಸಿ ಪ್ರೇಕ್ಷಕರಿಗೆ ತೋರಿಸುತ್ತಿದ್ದಾರೆ ಎಂದು ಅವರು ಒಪ್ಪಿಕೊಳ್ಳುತ್ತಾರೆ. ಆ ರೀತಿ ಮಾಡಿದರೆ ಶಿಕ್ಷೆಗೆ ಗುರಿ ಮಾಡುತ್ತೇವೆ ಎಂದು ಮಾನ್ಯ ಸಚಿವರು ಹೇಳುತ್ತಾರೆ, ಈ ರೀತಿ ಎಷ್ಟು ಜನರನ್ನು ಶಿಕ್ಷೆಗೆ ಗುರಿ ಮಾಡಲಾಗಿದೆ. ಅದನ್ನು ಸ್ವಲ್ಪ ಹೇಳುತ್ತೀರಾ. ಸುಪ್ರೀಂ ಕೋರ್ಟ್ ಹೋಗಿ ತಡೆಯಾಜ್ಞೆ ತಂದಿದ್ದಾರೆ ಎಂದು ಹೇಳಿದ್ದೀರಲ್ಲ, ಇದರ ಬಗ್ಗೆ, ತಡೆಯಾಜ್ಞೆಯನ್ನು ತೆರವು ಮಾಡಿಸುವುದಕ್ಕೆ ಏನು ಆಕ್ಷನ್ ತೆಗೆದುಕೊಂಡಿದ್ದೀರಿ. ಇದು ನ್ಯಾಯಬಾಹಿರವಾಗಿ ನಡೆಯುತ್ತಿದೆ. ಕೆಲವು ಚಲನಚಿತ್ರಗಳಿಗೆ 'ಎ' ಸರ್ಟಿಫಿಕೇಟ್ ಎಂದು ಕೊಡುತ್ತಾರೆ. ಮತ್ತೆ ಟಲಪಕ್ಕೆ ಯು, ಸರ್ಟಿಫಿಕೇಟ್ ಎಂದುಕೊಡುತ್ತಾರೆ. ಸಿನಿಮಾಗಳಿಗೆ 'ಎ' ಸರ್ಟಿಫಿಕೇಟ್ ಕೊಟ್ಟರೂ ಕೂಡಾ ಯಾವುದೇ ಆಡೆತಡೆಗಳಿಲ್ಲದೆ, ಚಿಕ್ಕಮಕ್ಕಳು ಹೋಗಿ ನೋಡುತ್ತಿದ್ದಾರೆ, ಹಾಗೂ ಹದಿನಾರು ವರ್ಷಕ್ಕೆ ಕೆಳಗಡೆ ಇರುವ ಯುವಕರೆಲ್ಲರೂ ಸಹ ಹೋಗಿ ಇಂತಹ ಸಿನಿಮಾಗಳನ್ನು ನೋಡುವಂತಹ ಪರಿಸ್ಥಿತಿ ಇದೆ. ಇದರ ಬಗ್ಗೆ ಏನೂ ಆಕ್ಷನ್ ತೆಗೆದುಕೊಳ್ಳುತ್ತಿಲ್ಲ. ಇದು ಇವರ ಕಂಟ್ರೋಲ್ ತಪ್ಪಿ ಹೋಗಿದೆ. ಇದರ ಬಗ್ಗೆ ಏನೂ ಹೇಳುತ್ತೀರಿ ?

ಶ್ರೀ ಜೇಪರಾಜ್ ಆಳ್ವ.—ಮಾನ್ಯ ಅಧ್ಯಕ್ಷರೇ, ಸರ್ವೋಚ್ಚ ನ್ಯಾಯಾಲಯದವರು ನೀಡಿರುವ ತಡೆಯಾಜ್ಞೆಯನ್ನು ತೆರವು ಮಾಡಿಸಲು ಕ್ರಮ ಕೈಗೊಳ್ಳಲಾಗಿದೆ. ಸೆನ್ಸಾರ್ ಆಗಿರುವುದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಕಷ್ಟ ಇದೆ. ಯಾವ ಭಾಗವನ್ನು ಸೆನ್ಸಾರ್‌ನವರು ತೆಗೆದು ಹಾಕಿದ್ದಾರೆ, ಆ ಭಾಗವನ್ನು ಅಳವಡಿಸಿಕೊಂಡು ಸಿನಿಮಾ ತೋರಿಸುತ್ತಾರೆ ಎಂದು ಮಾನ್ಯ ಸದಸ್ಯರು ಹೇಳುತ್ತಾರೆ. ನಾವು ನೋಡತಕ್ಕದ್ದು ಸೆನ್ಸಾರ್ ಸರ್ಟಿಫಿಕೇಟ್ ಇದೆಯೇ ಇಲ್ಲವೇ ಎಂಬುದನ್ನು. ಯಾವಾಗ ಸೆನ್ಸಾರ್ ಮಾಡಿದ್ದಾರೆ ಎಂಬುದನ್ನು ಅವರು ಯಾವ ಭಾಗವನ್ನು ತೆಗೆದು ಹಾಕಿದ್ದಾರೆ ಎಂಬುದು ನಮಗೆ ಗೊತ್ತಾ

ಗೂವುದಿಲ್ಲ. ನಾವು ಸೆನ್ಸಾರ್ ಬೋರ್ಡ್‌ನವರ ಜೊತೆ ಕುಳಿತುಕೊಂಡು ಸಿನಿಮಾ ನೋಡುವುದಕ್ಕೆ ಆಗುವುದಿಲ್ಲ. ಇದೆಲ್ಲಾ ಒಂದು ನಂಬಿಕೆಯ ವ್ಯವಸ್ಥೆ ಮೇಲೆ ನಡೆಯತಕ್ಕಂಥ ಕೆಲಸ ಆಗಿದೆ. ಯಾವುದಾದರೂ ಒಂದು ಚಲನಚಿತ್ರದಲ್ಲಿ ತೆಗೆದುಹಾಕಿದಂಥ ಆಕ್ಷೇಪಾರ್ಹವಾದ ಭಾಗಗಳನ್ನು ಅಳವಡಿಸಿಕೊಂಡು ಸಿನಿಮಾ ತೋರಿಸುತ್ತಿದ್ದಲ್ಲಿ ಅಂತಹ ಪ್ರಸಂಗಗಳನ್ನು ಮಾನ್ಯ ಸದಸ್ಯರು ಅಥವಾ ಸಾರ್ವಜನಿಕರು ಸರಕಾರದ ಮುಂದೆ ತಂದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಸೆನ್ಸಾರ್ ಸರ್ಟಿಫಿಕೇಟ್‌ನ್ನು ಮಾತ್ರ ನಾವು ನೋಡುತ್ತೇವೆ. ಆದರೆ ಸೆನ್ಸಾರ್‌ರವರ ಜೊತೆ ಕುಳಿತುಕೊಂಡು ನಾವು ಸಿನಿಮಾ ನೋಡಲು ಆಗುವುದಿಲ್ಲ. ಯಾವ ಭಾಗವನ್ನು ಅವರು ತೆಗೆದುಹಾಕಿದ್ದಾರೆ, ಅದನ್ನು ಸಿನಿಮಾದವರು ಅಳವಡಿಸಿದ್ದರೂ ಕೂಡಾ ನಮಗೆ ಅದು ಗೊತ್ತಾಗುವ ಸಾಧ್ಯತೆ ಕಡಿಮೆ. ಚಲನಚಿತ್ರದ ಬಗ್ಗೆ ಹೆಚ್ಚು ಕಾಳಜಿ ಉಳ್ಳಂಥ ವ್ಯಕ್ತಿಗಳು ಸರಕಾರಕ್ಕೆ ಇದನ್ನು ತಿಳಿಸಿದರೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನು 'ಎ' ಸರ್ಟಿಫಿಕೇಟ್ ಉಳ್ಳ ಚಲನಚಿತ್ರಕ್ಕೆ ಮಕ್ಕಳು ಹೋಗುವುದರ ಬಗ್ಗೆ ಪೋಲೀಸ್ ಅಧಿಕಾರಿಗಳಿಗೆ ತಿಳಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ಇದರ ಬಗ್ಗೆ ಒಂದು ಕಾಪಿರೈಟ್ ಸಹ ಇರುತ್ತದೆ. ಆ ಕಾಪಿರೈಟ್‌ನ ಉಲ್ಲಂಘನೆ ವಿಪರೀತವಾಗಿ ಆಗುತ್ತಿದೆ. ಕಾಪಿರೈಟ್‌ನ ಉಲ್ಲಂಘನೆ ಮಾಡಿಬಿಟ್ಟು, ಆ ಚಲನಚಿತ್ರ ಇನ್ನೂ ರಿಲೀಸೇ ಆಗಿರುವುದಿಲ್ಲ, ಎಲ್ಲೋ ಲಂಡನ್‌ನಲ್ಲಿ ತಯಾರಾಗಿರುತ್ತದೆ, ಅಂತಹವನ್ನು ತಂದು ವೀಡಿಯೋದಲ್ಲಿ ಪ್ರದರ್ಶನ ಮಾಡುತ್ತಾರೆ. ಇದರ ಜೊತೆಗೆ ಬೆಂಗಳೂರಿನಲ್ಲಿ ವೀಡಿಯೋಗಳಲ್ಲಿ ಜಾಸ್ತಿ ಬ್ಲೂಫಿಲ್ಮ್ ಸಹ ತೋರಿಸುತ್ತಾರೆ. ಇದಕ್ಕೆ ಪರವಾನಗಿ ಕೊಡುವುದು ಇದೆ. ಇದಕ್ಕೆ ಪರವಾನಗಿ ಕೊಟ್ಟಮೇಲೆ ಅವರನ್ನು ಬಿಟ್ಟು ಬಿಡುತ್ತಾರೆ. ಅವರ ಮೇಲೆ ಏನೂ ಆಕ್ಷನ್ ಇಲ್ಲ. ಈ ಬಗ್ಗೆ ಏನು ಆಕ್ಷನ್ ತೆಗೆದುಕೊಂಡಿರುತ್ತೀರಿ ? ಇದರ ಬಗ್ಗೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಜೀವರಾಜ್ ಆಳ್ವ.—ಮಾನ್ಯ ಅಧ್ಯಕ್ಷರೇ ಹಲವಾರು ಪ್ರಕರಣಗಳಲ್ಲಿ ಪೋಲೀಸ್ ಅಧಿಕಾರಿಗಳು ಆಕ್ಷನ್ ತೆಗೆದುಕೊಂಡಿದ್ದಾರೆ. ಹಲವಾರು ವೀಡಿಯೋ ಕ್ಲಬ್‌ಗಳ ಮೇಲೆ ದಾಳಿ ನಡೆಸಿದ್ದಾರೆ. ಅನೇಕ ಕೇಸ್‌ಗಳು ಆಗಿವೆ. ಕಾಪಿರೈಟ್ ಮಿಸ್ ಯೂಸ್ ಮಾಡುವಂತಹ ಪ್ರಸಂಗಗಳು ಬೆಂಗಳೂರು ನಗರದಲ್ಲಿ ಬಹಳ ಕಡಿಮೆಯಾಗಿದೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ.

4. ಗೋಕಾಕ್ ತಾಲ್ಲೂಕಿನ ಘಟಪ್ರಭಾದಲ್ಲಿ ದಲಿತರ ಮೇಲೆ ಹಲ್ಲೆ

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ದಿನಾಂಕ ೧೮ನೇ ಫೆಬ್ರವರಿ ೧೯೮೬ರಂದು, ಗೋಕಾಕ್ ತಾಲ್ಲೂಕಿನ ಘಟಪ್ರಭಾದಲ್ಲಿ ದಲಿತರ ಮೇಲೆ ನಡೆದಿರುವ ಹಲ್ಲೆಯ ಪ್ರಕರಣದ ಬಗ್ಗೆ ಮಾನ್ಯ ಗೃಹಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹಸಚಿವರು).—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರುಗಳಾದ ಶ್ರೀ ಬಿ. ಬಸವಲಿಂಗಪ್ಪನವರು ಹಾಗೂ ಶ್ರೀ ಕೆ. ಬಿ. ಶಾಣಪ್ಪನವರು ತಂದಿರುವ ಮೇಲ್ಕಂಡ ಗಮನ ಸೆಳೆಯುವ ಸೂಚನೆಯ ಬಗ್ಗೆ ನಾನು ಈ ಕೆಳಕಂಡ ಹೇಳಿಕೆಯನ್ನು ಕೊಡಲು ಇಚ್ಛಿಪಡುತ್ತೇನೆ.

ದಿನಾಂಕ. ೧೬-೨-೧೯೮೬ರಂದು ಅಬ್ಕಾರಿ ಸಬ್ ಇನ್ಸ್‌ಪೆಕ್ಟರ್ ಇಟ್ಟಣಗಿ ಎಂಬುವರು ತಮ್ಮ ಸಿಬ್ಬಂದಿ ಹಾಗೂ ೮ ರಿಂದ ೧೦ ಜನ ಅಬ್ಕಾರಿ ಗುತ್ತಿಗೆದಾರರು ಸೇರಿ ಸಣ್ಣ ಬಸ್ತಿಯಲ್ಲಿ ದಾಳಿ ನಡೆಸಿದರು. ಅವರು ಅಬ್ಕಾರಿ ಗುತ್ತಿಗೆದಾರರಾದ ಶ್ರೀ ಜಾರಕಿ ಹೊಳಿಯವರ ಸಂಬಂಧಿಕರು ೫೦-೬೦ ಜನ ಸಹ ಜೊತೆಯಲ್ಲಿದ್ದರು. ಕಳ್ಳಭಟ್ಟಿ ಇಳಿಸುವುದರ ಬಗ್ಗೆ ದಾಳಿ ನಡೆಸಿದಾಗ ೩೫ ರಿಂದ ೬೦ ವರ್ಷ ವಯಸ್ಸಿನವರಾದ ಯಂಕಪ್ಪ ದುರ್ಗಪ್ಪ ಕಾಂಚಿಕೊರವಾರ್, ಹನುಮಂತ ಸುಂಕಪ್ಪ ಕೊಂಚಿಕೊರವಾರ್ ಮತ್ತು ಲಕ್ಷ್ಮಣ್ ಸುಂಕಪ್ಪ ಕೊಂಚಿಕೊರವಾರ್‌ರವರು ದಾಳಿ ಮಾಡಿದವರ ಸಂಗಡ ಜಗಳಕ್ಕೆ ಇಳಿದು ಅವರ ಎರಡು ಜೀಪ್‌ಗಳಿಗೆ ಹಾನಿ ಮಾಡಿದರು. ಯಂಕಪ್ಪ ದುರ್ಗಪ್ಪ ಕೊಂಚಿಕೊರವಾರ್‌ರವರು ಘಟಪ್ರಭಾ ಪೋಲೀಸ್ ಠಾಣೆಯಲ್ಲಿ ದಾಖಲಾಗಿರುವ ವ್ಯಕ್ತಿ. ಹನುಮಂತ ಸುಂಕಪ್ಪ ಕೊಂಚಿಕೊರವಾರ್‌ರವರು ಗೌಳಿ ಗುಂಪಿನವರು ಮತ್ತು ಲಕ್ಷ್ಮಣ್ ಸುಂಕಪ್ಪ ಕೊಂಚಿಕೊರವಾರ್‌ರವರು ಕಳ್ಳಭಟ್ಟಿದಾರ. ಆ ದಿನದಂದು ಕೊಂಚಿಕೊರವಾರ್‌ರವರಾಗಲೀ ಅಥವಾ ಧಾಳಿ ನಡೆಸಿದಾಗ ಅಬ್ಕಾರಿ ಪಾರ್ಟಿಯವರಾಗಲೀ ಯಾವ ದೂರನ್ನೂ ನೀಡಿಲ್ಲ. ಆದರೆ ದಿನಾಂಕ. ೧೮-೨-೧೯೮೬ರಂದು ಜಾರಕಿ ಹೊಳಿಯವರ ಪಂಗ